# ಮುರಿದುಬಿದ್ದ ಪ್ರೇಮ?



ರಣಬೀರ್ ಕಪೂರ್ ಮತ್ತು ಅಲಿಯಾ ಭಟ್ ನಡುವಣ ಪ್ರೇಮ–ಪ್ರೀತಿ ಮುರಿದು ಬಿದ್ದಿದೆಯೆ? ಹಾಗೊಂದು ಸುದ್ದಿ ಬಾಲಿವುಡ್‌ನಲ್ಲಿ ಹರಿದಾಡುತ್ತಿದೆ. ಕಳೆದ ವಾರದವರೆಗೆ ಈ ಜೋಡಿಯ 'ಮದುವೆ ದಿನಾಂಕ ಯಾವತ್ತು?' ಎಂದು ಲೆಕ್ಕ ಹಾಕುತ್ತಿದ್ದವರೆಲ್ಲ ಹೈರಾಣಾಗುವಂತೆ ಈಗ ಘಟಸ್ಫೋಟದ ಸುದ್ದಿ ಹರಿದಾಡುತ್ತಿದೆ. ಈ ಜೋಡಿ ನಟಿಸಿರುವ ಕರಣ್ ಜೋಹರ್ ನಿರ್ಮಾಣದ 'ಬ್ರಹ್ಮಾಸ್ತ್ರ' ಶೂಟಿಂಗ್‌ನೊಂದಿಗೇ ಪ್ರೇಮ ಶುರುವಾಗಿತ್ತು. ಎಲ್ಲೆಂದರಲ್ಲಿ ತೆಕ್ಕೆಬಿದ್ದು ಓಡಾಡಿದ ಈ ಜೋಡಿ ಛಾಯಾಗ್ರಾಹಕರಿಗೂ ಬಿಂದಾಸ್ ಪೋಸ್ ನೀಡುತ್ತಿತ್ತು. ಅಲಿಯಾಳ ಇನ್‌ಸ್ಟಾಗ್ರಾಮ್‌ನಲ್ಲಂತೂ ದಂಡಿ ಫೋಟೊಗಳ ರಾಶಿ. ಆದರೆ ಇತ್ತೀಚೆಗೆ ಅಲಿಯಾ ಬರ್ತ್‌ಡೇ ಪಾರ್ಟಿಯಲ್ಲಿ ಮಾತ್ರ ರಣಬೀರ್ ಸುಳಿವಿಲ್ಲ! ಹಾಗೆಂದೇ ಈ ಜೋಡಿಯ ಪ್ರೇಮ ಮುರಿದುಬಿತ್ತೇ ಎನ್ನುವ ಅನುಮಾನ ಎಲ್ಲರಲ್ಲೂ!



## ಜಾಹ್ನವಿ: ತೂಕದ ಮಾತು

ಶ್ರೀದೇವಿಯ ಮಗಳು ಜಾಹ್ನವಿಗೆ 23 ದಾಟಿತು. ಸದ್ಯಕ್ಕೆ ಬಾಲಿವುಡ್‌ನಲ್ಲಿ ತನ್ನದೇ ಆದ ಅಭಿಮಾನಿ ವರ್ಗವನ್ನು ಹೊಂದಿರುವ ಜಾಹ್ನವಿ, ಬುದ್ಧಿವಂತೆಯೂ ಹೌದು. ಮಾತಿನಲ್ಲಿರುವ ತೂಕ ಆಕೆಯನ್ನು ತನ್ನ ವಯಸ್ಸಿನ ಇತರ ಬಾಲಿವುಡ್ ನಟಿಯರಿಗಿಂತ ಭಿನ್ನವಾಗಿಸಿದೆ. ಜಾಹ್ನವಿಯಲ್ಲಿ ಶ್ರೀದೇವಿಯನ್ನು ಕಾಣಲು ಹೊರಟ ಲಕ್ಷಾಂತರ ಪ್ರೇಕ್ಷಕರಿದ್ದಾರೆ. ಆರಂಭದ ಸಿನಿಮಾ 'ಧಡಕ್'ನಲ್ಲಿ ಇದು ಜಾಹ್ನವಿಯ ಗಮನಕ್ಕೂ ಬಂದಿತ್ತು. 'ನಾನು ನನ್ನ ಅಮ್ಮನಂತಹ ನಟಿ ಅಲ್ಲ. ನನ್ನ ನಟನೆಯೇ ಬೇರೆ. ಹಾಗೆಂದು ಅದನ್ನು ಪ್ರೂವ್ ಮಾಡಲು ಸಮಯ ಹಿಡಿಯುತ್ತದೆ ಎನ್ನುವುದೂ ನನಗೆ ಗೊತ್ತು. ಇನ್ನೂ ಒಂದೈದು ಸಿನಿಮಾಗಳಾದ ಮೇಲೆ ನನ್ನ ನಟನೆಯೇ ವಿಭಿನ್ನ ಎನ್ನುವುದು ಪ್ರೇಕ್ಷಕರಿಗೆ ಗೊತ್ತಾಗಬಹುದು' ಎನ್ನುವುದು ಜಾಹ್ನವಿಯ ನೇರನುಡಿ.

ಕೆಲವು ತಿಂಗಳ ಹಿಂದೆ 'ಬಾಲಿವುಡ್‌ನಲ್ಲಿ ಸ್ವಜನ ಪಕ್ಷಪಾತ ನಡೆಯುತ್ತಿದೆ' ಎನ್ನುವ ಆರೋಪ ಕೇಳಿಬಂದಾಗಲೂ ಜಾಹ್ನವಿ ನೀಡಿದ ಸಂದರ್ಶನ ವಿಭಿನ್ನವಾಗಿತ್ತು. 'ಹೌದು, ಬಾಲಿವುಡ್‌ನಲ್ಲಿ ತಾರೆಯರು ಅವರ ಮಕ್ಕಳನ್ನೇ ಬೆಳೆಸುವ ಪದ್ಧತಿ ಇದೆ. ಇದರಲ್ಲಿ ಆಕ್ಷೇಪಿಸುವಂಥದ್ದು ಏನಿದೆ? ನನ್ನ ಉದಾಹರಣೆಯನ್ನೇ ತೆಗೆದುಕೊಂಡರೆ, ನನಗೆ ಫ್ಯಾಮಿಲಿ ಬೆಂಬಲ ಇದ್ದುದರಿಂದ ನಟಿಯಾದೆ ಅನ್ನುವುದು ನಿಜ. ಬಹುಶಃ ಮೊದಲ ಸಿನಿಮಾದಲ್ಲಿ ನನ್ನನ್ನು ಜಡ್ಜ್ ಮಾಡಲು ನಿಮಗೆ ಸಾಧ್ಯವಾಗಲಿಕ್ಕಿಲ್ಲ. ಆದರೆ ನನ್ನದೇ ಆದ ಛಾಪೊಂದನ್ನು ಮೂಡಿಸಲು ಕಷ್ಟಪಟ್ಟು ಕೆಲಸ ಮಾಡಲು ಅವತ್ತೇ ನಿರ್ಧರಿಸಿದೆ. ಅದರಂತೆ ಶ್ರಮ ವಹಿಸಿ ನನಗೆ ಸಿಕ್ಕ ಅವಕಾಶವನ್ನು ಬಳಸಿಕೊಳ್ಳುತ್ತಿದ್ದೇನೆ' ಎನ್ನುವುದು ಜಾಹ್ನವಿ ಖಡಕ್ ಉತ್ತರವಾಗಿತ್ತು.

'ಸಿನಿಮಾದವರನ್ನೇ ಇದಕ್ಕೆ ಏಕೆ ದೂರುತ್ತೀರಿ? ಡಾಕ್ಟರ್ ಮಗನೂ ಡಾಕ್ಟರ್ ಆಗ್ತಾನೆ. ಅವನ ಕ್ಲಿನಿಕ್ ಮುಂದೆ ಹೋಗಿ ಯಾರಾದರೂ ಸ್ವಜನ ಪಕ್ಷಪಾತ ಎಂದು ಧರಣಿ ಮಾಡುತ್ತೀರಾ? ಎಲ್ಲ ವೃತ್ತಿಯಲ್ಲೂ ಈ ಪ್ರವೃತ್ತಿ ಇದೆ. ಕುಟುಂಬದಿಂದಾಗಿ ಮೊದಲ ಅವಕಾಶ ಸಿಕ್ಕಿದ ತಕ್ಷಣ ಯಾರೂ ಯಶಸ್ಸು ಪಡೆಯುವುದಿಲ್ಲ. ಅಂತಿಮವಾಗಿ ನಿಮ್ಮ ನಟನೆಯ ಸಾಮರ್ಥ್ಯವೇ ನಿಮ್ಮನ್ನು ದಡ ಮುಟ್ಟಿಸುವುದು' ಎಂದು ಜಾಹ್ನವಿ ಹೇಳಿದ್ದು ಟೀಕಾಕಾರರಿಗೆ ಮುಟ್ಟಿ ನೋಡಿಕೊಳ್ಳುವಂತಹ ಉತ್ತರವಾಗಿತ್ತು.

ಅಂದ ಹಾಗೆ ಜಾಹ್ನವಿ ಕೈಯಲ್ಲೀಗ ನಾಲ್ಕು ಚಿತ್ರಗಳಿವೆ. 'ಗುಂಜನ್ ಸಕ್ಸೇನಾ: ದಿ ಕಾರ್ಗಿಲ್ ಗರ್ಲ್' ನಿಜಜೀವನ ಆಧರಿಸಿದ ಚಿತ್ರ. 'ರೂಹಿ ಅಫ್ಜಾನಾ', 'ದೋಸ್ತಾನಾ 2' ಮತ್ತು 'ತಖ್ತ್' ಚಿತ್ರಗಳಲ್ಲಿ ಈಕೆ ವಿಭಿನ್ನ ಪಾತ್ರಗಳನ್ನು ನಿರ್ವಹಿಸುತ್ತಿದ್ದಾಳೆ. 23ರ ಹರೆಯದಲ್ಲೇ ಸಾಕಷ್ಟು ಪ್ರೌಢಿಮೆ ಹೊಂದಿರುವ ನಟಿಯೀಕೆ. ■